**ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ಭೋಜೇಗೌಡ, ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ.ಬಿ.ಎಂ ಫಾರೂಕ್ ಹಾಗೂ ಇತರರು ಕೋರಿರುವಂತೆ ನಿಯಮ - 72ರ ಅಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

ಕೃಷಿಗಾಗಿ ಸಾಲ ಮಾಡಿ ಅದನ್ನು ತೀರಿಸಲಾಗದೆ ಆತ್ಮಹತ್ಯೆಯ ಹಾದಿ ಹಿಡಿದ ರೈತರ ಮಕ್ಕಳು ಶೈಕ್ಷಣಿಕವಾಗಿ ಅತಂತ್ರರಾಗುವುದನ್ನು ತಪ್ಪಿಸಲು, ಆ ಮಕ್ಕಳ ಶಿಕ್ಷಣದ ವೆಚ್ಚವನ್ನು ರಾಜ್ಯ ಸರ್ಕಾರದಿಂದಲೇ ಭರಿಸಲು ಕೆಲವು ವರ್ಷಗಳ ಹಿಂದೆ ತೀರ್ಮಾನ ಕೈಗೊಳ್ಳಲಾಗಿತ್ತು. ಅನ್ನದಾತರ ಮಕ್ಕಳು ಅನಾಥರಾಗಬಾರದು, ಅವರಿಗೂ ಉತ್ತಮ ಶಿಕ್ಷಣ ಸಿಗಬೇಕು ಎಂಬ ಕಾರಣಕ್ಕೆ ರೂಪುಗೊಂಡ ದೊಡ್ಡ ಉದ್ದೇಶದ ಸಣ್ಣ ಯೋಜನೆ ಇದು. ಇದರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿತ್ತು. ಈ ಯೋಜನೆ ಪ್ರಕಾರ, ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ವಾರ್ಷಿಕ ಬೋಧನಾ ಶುಲ್ಕವಾಗಿ 24 ಸಾವಿರ ರೂ. ಮತ್ತು ಬೋಧನಾ ಮತ್ತು ವಸತಿ ಶುಲ್ಕ ಒಳಗೊಂಡಂತೆ ಒಟ್ಟಾರೆ 48 ಸಾವಿರ ರೂ. ಗರಿಷ್ಠ ಮಿತಿಯಲ್ಲಿ ಶುಲ್ಕ ಮರುಪಾವತಿ ಮಾಡಲಾಗುತ್ತಿತ್ತು. ಈಗಿನ ಶೈಕ್ಷಣಿಕ ಪರಿಸರದಲ್ಲಿ ಇದು ಸಣ್ಣ ಮೊತ್ತವೇ. ವರ್ಷಕ್ಕೆ ಹೆಚ್ಚೆಂದರೆ 20-25 ಲಕ್ಷ ರೂ.ವರೆಗೆ ವೆಚ್ಚವಾಗುತ್ತದೆ. ಇದು ಸರ್ಕಾರಕ್ಕೆ ಹೊರೆ ಏನಿಸುವುದೇ ಇಲ್ಲ. ಅಲ್ಲದೇ ಇದೊಂದು ಅನುಪಯುಕ್ತ ಕಾರ್ಯಕ್ರಮ ಅಥವಾ ಯೋಜನೆ ಎಂದು ಯಾವ ಆಯಾಮದಲ್ಲೂ ಕಾಣಿಸದು. ಕಳೆದ 9 ತಿಂಗಳಿಂದ ಅನುದಾನ ಬಿಡುಗಡೆ ಮಾಡದೇ ಉದಾಸೀನ ತೋರುತ್ತಿದೆ. ಇದರಿಂದಾಗಿ ಸಾವಿರಾರು ಫಲಾನುಭವಿಗಳು ಅತಂತ್ರರಾಗಿದ್ದಾರೆ. ಈ ಯೋಜನೆ ಮುಂದುವರೆಸಲು ಆಡಳಿತ ಪಕ್ಷದ ಶಾಸಕರೇ ಸರ್ಕಾರಕ್ಕೆ ಮನವಿ ಸಲ್ಲಿಸಿ, ರೈತರ ಮಕ್ಕಳಿಗೆ ನೆರವಾಗಲು ಬೇಡಿಕೆ ಇಟ್ಟರೂ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಮುಂದುವರೆದು, ಆತ್ಮಹತ್ಯೆ ಮಾಡಿಕೊಂಡ ರೈತರ ಸಮಗ್ರ ಮಾಹಿತಿ ಸರ್ಕಾರದ ಬಳಿ ಇದ್ದೇ ಇರುತ್ತದೆ. ಪುನಃ ಆ ಕುಟುಂಬದಿಂದ ವರದಿ ತರಿಸಿಕೊಳ್ಳುವ ಅಗತ್ಯವೇ ಬೀಳುವುದಿಲ್ಲ. ಏಕಪಾಲಕರನ್ನು ಕಳೆದುಕೊಂಡ ಮಕ್ಕಳೊಂದಿಗೆ ನಿಲ್ಲಬೇಕಿದ್ದ ಸರ್ಕಾರ ಅವರಿಂದ ಅಂತರ ಕಾಯ್ದುಕೊಂಡಿರುವುದೂ ಸರಿಯಲ್ಲ.

ಆದುದರಿಂದ, ಆತ್ಮಹತ್ಯೆ ಮಾಡಿಕೊಂಡ ರೈತನ ಮಕ್ಕಳನ್ನು ನಡು ನೀರಲ್ಲೇ ಕೈ ಬಿಡದೇ ಆ ಮಕ್ಕಳಿಗೆ ನೆರವಾಗುವ ಮನಸ್ಸು ಮಾಡಲಿ ಮತ್ತು ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಮಾಡಲು ಸರ್ಕಾರದ ಅಧ್ಯ ಗಮನವನ್ನು ಸೆಳೆಯಬಯಸುತ್ತೇವೆ.

**ಉತ್ತರ:**

ರಾಜ್ಯದಲ್ಲಿ ಬರಪರಿಸ್ಥಿತಿ ಹಾಗೂ ಸಮಸ್ಯೆಗಳ ಹಿನ್ನಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳ ಕುಟುಂಬಗಳಿಗೆ ಪರಿಹಾರ ನೀಡುವ ಸಂಬಂಧ ಈ ಯೋಜನೆಯು ಸರ್ಕಾರದ ಆದೇಶ ಸಂಖ್ಯೆ ಇಡಿ 227 ಮಾಹಿತಿ 2015, ದಿನಾಂಕ: 13.11.2015 ರನ್ವಯ ದಿನಾಂಕ: 01.04.2015ರ ನಂತರ ಆತ್ಮಹತ್ಯೆ ಮಾಡಿಕೊಂಡ ರೈತರ ಮ್ಯಕಳಿಗೆ ಉಚಿತ ಶಿಕ್ಷಣ ನೀಡುವ ದೃಷ್ಟಿಯಿಂದ ಆತ್ಮಹತ್ಯೆ

ಮಾಡಿಕೊಂಡ ರೈತರ ಮಕ್ಕಳ ಶಿಕ್ಷಣವನ್ನು ಮುಂದುವರೆಸಲು ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚದ ಮರುಪಾವತಿ ಮಡುವ ಬಗ್ಗೆ ಈ ಯೋಜನೆಯು ಕಾರ್ಯರೂಪಕ್ಕೆ ಬಂದಿರುತ್ತದೆ.

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದ್ದು, ಖಾಸಗಿ ಅನುದಾನ ರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ವಾರ್ಷಿಕ ಬೋಧನಾ ಶುಲ್ಕವಾಗಿ ರೂ. 24,000/- ಮತ್ತು ವಸತಿ ಶುಲ್ಕಗಳಿಗಾಗಿ ರೂ. 24,000/- ಒಟ್ಟು ರೂ. 48,000/- ರ ಗರಿಷ್ಠ ಮಿತಿಯಲ್ಲಿ ಶುಲ್ಕವನ್ನು ಮರುಪಾವತಿಸಲಾಗಿರುತ್ತದೆ.

ಇದರಂತೆ 2015-16ನೇ ಸಾಲಿನಿಂದ ಪ್ರತಿ ವರ್ಷದಂತೆ ಮಕ್ಕಳ ಬೇಡಿಕೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮತ್ತು ವಿತರಣೆಗೆ ಕ್ರಮವಹಿಸಲಾಗುತ್ತಿದ್ದು, 2020-21ನೇ ಸಾಲಿನಲ್ಲಿ ರಾಜ್ಯದಾದ್ಯಂತ ಸ್ವೀಕೃತಗೊಂಡ ಪ್ರಸ್ತಾವನೆಗಳಂತೆ ಶಿಕ್ಷಣ ಮತ್ತು ವಸತಿ ಶುಲ್ಕ ಮರುಭರಣಕ್ಕಾಗಿ 169 ಫಲಾನುಭವಿ ರೈತರ ಮಕ್ಕಳ ಖಾತೆಗೆ ರೂ. 22.49 ಲಕ್ಷಗಳ ಅನುದಾನ ಸಂದಾಯ ಮಾಡಲಾಗಿರುತ್ತದೆ.

2021-22ನೇ ಸಾಲಿಗೆ ರಾಜ್ಯದಾದ್ಯಂತ ಸ್ವೀಕೃತಗೊಂಡ ಪ್ರಸ್ತಾವನೆಗಳಂತೆ ಶಿಕ್ಷಣ ಮತ್ತು ವಸತಿ ಶುಲ್ಕಗಳ ಮರುಭರಣಕ್ಕಾಗಿ ರೂ. 19.00 ಲಕ್ಷಗಳ ಅನುದಾನದ ಬೇಡಿಕೆ ಪರಿಶೀಲನಾ ಹಂತದಲ್ಲಿದ್ದು, 2022-23 ಮತ್ತು 2023-24ನೇ ಸಾಲಿಗೆ ಸಂಬಂಧಿಸಿದಂತೆ ಜಿಲ್ಲಾ ಹಂತದಿಂದ ಪ್ರಸ್ತಾವನೆಗಳನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ.

ಮುಂದುವರೆದು, 2024-25ನೇ ಸಾಲಿಗೆ ಸಂಬಂಧಿಸಿದಂತೆ ಅಂದಾಜು ರೂ 25.00 ಲಕ್ಷಗಳ ಅನುದಾನವನ್ನು ಮೀಸಲಿರಿಸುವಂತೆ ಕೋರಿ ಆರ್ಥಿಕ ಇಲಾಖೆಗೆ ಕ್ರಿಯಾ ಯೋಜನೆಯನ್ನು ಸಲ್ಲಿಸಲಾಗಿದ್ದು, ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳ ಶಾಲಾ ಶುಲ್ಕ ಮತ್ತು ವಸತಿ ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ತುರ್ತಾಗಿ ಕ್ರಮವಹಿಸಲಾಗುತ್ತಿದೆ.

**ಇಪಿ 13 ಇಜಿಓವಿ 2024**

**(ಎಸ್. ಮಧುಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**